ವಿಸ್ತರಿಸಲು ಪ್ರಸ್ತಾಪಿಸಲಾಗಿದೆ

ಆ) ಈಗ ಇರುವ ಲೆವೆಲ್ ಕ್ರಾಸಿಂಗ್‌ಗಳಿಗೆ ಬದಲಾಗಿ ಈ ಕೆಳಕಂಡ ರೈಲ್ವೆ ಮೇಲು ಸೇತುವೆ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು

1 ಲಿಂಗರಾಜಪುರಂ

2 ಇಂಡಿಯಾ ಟೊಬ್ಯಾಕೊ ಫ್ಯಾಕ್ಟರಿ

3 ಬಾಣಸವಾಡಿ

ಈ ಕೆಳಕಂಡ ಎರಡು ರೈಲ್ವೆ ಕೆಳ ಸೇತುವೆಗಳನ್ನು ಅಗಲಗೊಳಿಸಲಾಗುವುದು

1 ಫ್ರೇಜರ್ ಟೌನ್ ಪೊಲೀಸ್ ರಾಣ ಹತ್ತಿರ

2 ನೆಹರೂ ವೃತ್ತದ ಹತ್ತಿರ

ಇ) ಏಪ್ರಿಲ್ 2002ರಲ್ಲಿ ಕೈಗೆತ್ತಿಕೊಳ್ಳಲಾಗುವುದು

ಬೆಂಗಳೂರಿನ ಕೃಷ್ಣರಾಜೇಂದ್ರ ಮಾರುಕಟ್ಟೆ ಪ್ರದೇಶದ ಅಂಗಡಿಗಳ ಸ್ಥಳಾಂತರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 115(480)

ಸದಸ್ಯರ ಹೆಸರು ಶ್ರೀ ಪಿ.ಸಿ ಮೋಹನ (ಚಿಕ್ಕಪೇಟೆ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಪ್ರಶ್ನೆ

ಅ) ಬೆಂಗಳೂರಿನ ಕೃಷ್ಣರಾಜೇಂದ್ರ ಮಾರುಕಟ್ಟೆ ಪ್ರದೇಶದಲ್ಲಿರುವ ಹೂವು ಹಣ್ಣು ತರಕಾರಿ ಮಾರುಕಟ್ಟೆ, ಇತ್ಯಾದಿ ಅಂಗಡಿ ಹಾಗೂ ಬಂಬೂ ಬಜಾರ್ ಅನ್ನು ಬೇರಡೆಗೆ ಸ್ಥಳಾಂತರ ಮಾಡಲು ಸರ್ಕಾರ ತೀರ್ಮಾನಿಸಿದಯೇ? ಅದಕ್ಕೆ ಕಾರಣಗಳೇನು?

ಆ) ಸ್ಥಳಾಂತರಕ್ಕೆ ಸ್ಥಳೀಯ ಅಂಗಡಿಗಳ ಮಾಲೀಕರು ತಮ್ಮ ಒಪ್ಪಿಗೆ ನೀಡಿದ್ದಾರಯೇ?

ಇ) ಅವರಿಗೆ ಪರ್ಯಾಯ ಸ್ಥಳಗಳನ್ನು ಗುರುತಿಸಲಾಗಿದೆಯೇ? ಸ್ಥಳಾಂತರ ಪ್ರಕ್ರಿಯೆ ಯಾವ ಹಂತದಲ್ಲಿದೆ?

ಉತ್ತರ

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಚಿಕ್ಕಬಳ್ಳಾಪುರ ನಗರಕ್ಕೆ ಒಳಚರಂಡಿ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 116(484)

ಸದಸ್ಯರ ಹೆಸರು ಶ್ರೀಮತಿ ಅನುಸೂಯಮ್ಮ ನಟರಾಜನ್ ಕ ವಿ (ಚಿಕ್ಕಬಳ್ಳಾಪುರ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ (ಮುಖ್ಯ ಮಂತ್ರಿಯವರು)

ಪ್ರಶ್ನೆ

1 ಚಿಕ್ಕಬಳ್ಳಾಪುರ ನಗರದಲ್ಲಿ ಸುಮಾರು 60,000 ಜನ ಸಂಖ್ಯೆಯಿದ್ದು ನಗರದಲ್ಲಿ ಸ್ವಚ್ಛತೆಯನ್ನು ಕಾಪಾಡಲು ಸರಿಯಾದ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2 ನಗರದಲ್ಲಿ ಒಳಚರಂಡಿ ಯೋಜನೆಯನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಉತ್ತರ

1 ಬಂದಿದೆ

2 ಚಿಕ್ಕಬಳ್ಳಾಪುರ ನಗರದ ಒಳಚರಂಡಿ ಯೋಜನೆಯ ಅಂದಾಜು ಪಟ್ಟಿ ಸಿದ್ಧಪಡಿಸಲು ತಗಲುವ ಸರ್ವೆ ವೆಚ್ಚ ರೂ 5 00 ಲಕ್ಷ ಬೇಕಾಗಿದ್ದು ಹಣ ಪಾವತಿಸಲು ನಗರಸಭೆಗೆ ಕೋರಲಾಗಿದ್ದು ಹಣಪಾವತಿಸಿದ ಕೂಡಲೇ ಅಂದಾಜು ಪಟ್ಟಿ ಸಿದ್ಧಪಡಿಸಿ ಯೋಜನೆಯ ಅನುಮೋದನೆಗೆ ಕ್ರಮ ಜರುಗಿಸಲಾಗುವುದು